ಎಂಬ ಮಾದರಿಯದಾಗಿ ಇರುವುದಿಲ್ಲ. ಆ ಕಾರಣಕ್ಕಾಗಿಯೇ ಇಂದು ಗಮನಾರ್ಹ ಸಂಖ್ಯೆಯ ಯುವತಿಯರು ವಿವಾಹವನ್ನು ಅಲ್ಲಗಳೆಯುತ್ತಿರಬಹುದೇ?

ಜಗತ್ತಿನ ಇಂದಿನ ಅನೇಕ ಯುವತಿಯರು ಮದುವೆಯನ್ನು ಅಲ್ಲಗಳೆಯುತ್ತಿದ್ದಾರೆಂದರೆ, ವಿವಾಹ ವ್ಯವಸ್ಥೆಯ ಬಗ್ಗೆ ಅವರಿಗೆ ನಂಬಿಕೆ ಹೊರಟುಹೋಗಿದೆಯೆಂದೇ ಅರ್ಥ. ಅವರು ತಮ್ಮ ತಾಯಿ ಅಥವಾ ಇತರ ಮಹಿಳೆಯರ ಜೀವನವನ್ನು ಕಂಡು ಹೀಗೆ ಹೇಳುತ್ತಿರಬಹುದು. ಇಂತಹ ಬಂಧನಕ್ಕೆ ಒಳಗಾಗದಿದ್ದರೆ ತಾವು ಇಚ್ಛಿಸಿದ್ದ ಕೆಲಸ ಕಾರ್ಯಗಳನ್ನು ಸ್ವತಂತ್ರವಾಗಿ ಮಾಡಬಹುದೆಂಬ ಭಾವನೆ ಅವರಲ್ಲಿರಬಹುದು. ಆ ಬಂಧನದೊಳಗೆ ಹೆಜ್ಜೆಯಿಟ್ಟರೆ ಗಂಡನ ಅಭಿರುಚಿಗೆ ತಕ್ಕಂತೆ ತಮ್ಮದಲ್ಲದ ವೇಷ ತೊಟ್ಟು ಕೇವಲ ಮನೆಯನ್ನಷ್ಟೇ ನಡೆಸಬೇಕಾದೀತು ಅನಿಸಿರಬಹುದು. ಶತಮಾನಗಳಿಂದಲೂ ಯುವತಿಯರನ್ನು ವಿವಾಹವೆಂದರೆ ಹೂ ಚೆಲ್ಲಿದ ಹಾದಿ, ಫೇರಿಲ್ಯಾಂಡ್ ಎಂದು ಏನೇನೋ ಹೇಳಿ ಆ ಬಂಧನದೊಳಗೆ ಸಿಲುಕಿಸುತ್ತಿದ್ದರು. ಆದರೆ ಇಂದಿನ ಯುವತಿಯರು ತಮ್ಮ ಪ್ರತಿಭೆಗಳನ್ನು ಬಳಸಿಕೊಂಡು ಭವಿಷ್ಯದಲ್ಲಿ ಏನನ್ನಾದರೂ ಸಾಧಿಸುವುದರ ಬಗ್ಗೆಯೇ ಹೆಚ್ಚು ತುಡಿಯುತ್ತಿದ್ದಾರೆ.

ಸ್ತ್ರೀವಾದವೆಂಬುದು ಎಲ್ಲ ಸಂವೇದನೆಗಳನ್ನೂ ಒಳಗೊಳ್ಳುವ ಹಾದಿ. ಸ್ತ್ರೀವಾದವು ಹಿಂದುಳಿದವರ, ನೊಂದವರ, ಶೋಷಿತರ, ದಲಿತರ, ತೃತೀಯಲಿಂಗಗಳ, ಅಲ್ಪಸಂಖ್ಯಾತರ, ಹೀಗೆ ಎಲ್ಲರನ್ನೂ ಒಳಗೊಂಡ ಸಮಸಮಾಜದ ಕಟ್ಟುವಿಕೆಗೆ ಸದಾ ತುಡಿಯುತ್ತದೆ. ಹಾಗಾಗಿ ನಾವೆಲ್ಲರೂ ಸ್ತ್ರೀವಾದಿಗಳಾಗಬೇಕಿದೆ.

◆ ಇಂದು ಇಡೀ ಹೆಣ್ಣು ಸಮುದಾಯವೇ (ಕೆಲವರನ್ನು ಹೊರತುಪಡಿಸಿ) ಪ್ರಜ್ಞಾವಸ್ಥೆಯನ್ನು ಕಳಕೊಂಡು ತನ್ನ ಇರವನ್ನೇ ಮರೆತು ಗಂಡಿನ ಯಜಮಾನಿಕೆಯನ್ನು ಪರಮ ಸತ್ಯ ಎಂಬಂತೆ ಒಪ್ಪಿಬಿಟ್ಟಿದೆ. ಇಂಥ ಸಂದರ್ಭದಲ್ಲಿ ಮಹಿಳಾ ಸಮಾವೇಶಗಳು ಹೇಗೆಲ್ಲ ಕೆಲಸ ಮಾಡಬಲ್ಲವು ಅನ್ನುತ್ತೀರಿ?

ಖಂಡಿತ ಕೆಲಸ ಮಾಡುತ್ತವೆ. ಇಲ್ಲಿ ಅನೇಕ ಮಹಿಳೆಯರನ್ನು ಅವರು ಭೇಟಿಯಾಗಿ ಪರಸ್ಪರ ಅನುಭವಗಳನ್ನು ಹಂಚಿಕೊಳ್ಳುತ್ತ, ಸಮಾವೇಶದಲ್ಲಿನ ಭಾಷಣಕಾರರ ಮಾತುಗಳನ್ನು ಕೇಳುವಾಗಲೂ ಎಲ್ಲೋ ಒಂದು ಕಡೆ ಅದು ಅವರ ಜೀವನವನ್ನು ಸ್ಪರ್ಶಿಸಿದಾಗ ಅವರು ಯೋಚಿಸಲು ತೊಡಗುತ್ತಾರೆ. ಸ್ವಂತ ಯೋಚನೆ ಎಂಬುದು ತುಂಬಾ ಮುಖ್ಯವಾದುದು. ಆದರೆ ಇಂದಿನ ಮಹಿಳಾ ಸಮುದಾಯ ಏನನ್ನೂ ಹೆಚ್ಚಿಗೆ ಯೋಚಿಸದೇ ಅದೇ ಮಾಮೂಲಿ ದೈನಿಕ ಜೀವನ ನಡೆಸುತ್ತಿದೆ. ಕೆಲ ಪುರುಷರೂ ಇದಕ್ಕೆ ಹೊರತಾಗಿಲ್ಲ. ಇಂದಿನ ಮಹಿಳೆಯರು ಹಳೆಯ ಸಾಂಪ್ರದಾಯಿಕ ಸಂಕೋಲೆಗಳಿಂದ ಹೊರಬಂದು ತಮ್ಮ ಜೀವನದ ಬಗ್ಗೆ, ತಮ್ಮ ಇರುವಿಕೆಯ ಬಗ್ಗೆ ಭಿನ್ನವಾಗಿ ಯೋಚಿಸಲೇಬೇಕಾಗಿದೆ. ಆ ನಿಟ್ಟಿನಲ್ಲಿ ಮಹಿಳಾ ಸಮಾವೇಶಗಳು ನೀರೆರೆಯುತ್ತದೆ.

◆ ಕೇಂದ್ರ ಸಾಹಿತ್ಯ ಅಕಾಡೆಮಿ ಗೌರವ ಸೇರಿದಂತೆ ಅನೇಕ ಪ್ರತಿಷ್ಠಿತ ಪುರಸ್ಕಾರಗಳಿಗೆ ನೀವು ಭಾಜನರಾಗಿದ್ದೀರಿ. ಬರಹಗಾರ ಪಡೆದುಕೊಳ್ಳುವ ಈ ಪ್ರಶಸ್ತಿ–ಪುರಸ್ಕಾರ, ಸನ್ಮಾನಗಳ ಕುರಿತು ನಿಮ್ಮ ನಿಲುವೇನು? ನಮ್ಮ ಸೃಜನಶೀಲತೆಗೆ ಅದರ ಅಗತ್ಯವಿದೆಯೇ?

ಬರಹಗಾರನ ಸೃಜನಶೀಲತೆಗೆ ಪ್ರಶಸ್ತಿಗಳ ಅವಶ್ಯಕತೆ ಖಂಡಿತ ಇಲ್ಲ. ಆದರೆ ಬರಹಗಾರನಿಗೆ ಪ್ರಶಸ್ತಿಗಳು ಒಂದು ಬಗೆಯ ಆತ್ಮವಿಶ್ವಾಸವನ್ನು ನೀಡಬಲ್ಲವು. ಒಂದು ಸೂಕ್ಷ್ಮ ಸಂಗತಿಯನ್ನು ಹೇಳಲು ಹೊರಟಿರುವ ಬರಹಗಾರನಿಗೆ ಸುತ್ತಲಿನ ಸಮಾಜ ಅದನ್ನು ಪ್ರೋತ್ಸಾಹಿಸುವ ಬೆಂಬಲ ನೀಡುವ